**ಆಕಾಶವಾಣಿ** **4.12.2024**

**ಪ್ರದೇಶ ಸಮಾಚಾರ** **ಮಧ್ಯಾಹ್ನ 12ಕ್ಕೆ**

**ಓದುತ್ತಿರುವವರು: ಹರ್ಷವರ್ಧನ ಶೀಲವಂತ ಬುಧವಾರ**

<><><>

**1. ಇಂದು ನೌಕಾ ದಳ ದಿನಾಚರಣೆ.** ಕಾರವಾರದ ಸೀಬರ್ಡ್ ನೌಕಾನೆಲೆ, ಭಾರತೀಯ ಪ್ರಧಾನ ನೌಕಾ ನೆಲೆಗಳಲ್ಲಿ ಒಂದಾಗಿದೆ. 'ನೇವಿ ಡೇ' ಅಂಗವಾಗಿ ಉತ್ತರಕನ್ನಡ ಜಿಲ್ಲೆಯ, ಕಾರವಾರದ ಅರ್ಗಾ ಬಳಿಯ ನೌಕಾನೆಲೆಯಲ್ಲಿ, ಆಕರ್ಷಕ 'ಬೀಟಿಂಗ್ ರಿಟ್ರೀಟ್ ಹಾಗೂ ಅಟ್ ಹೋಮ್' ಸಮಾರಂಭ ಆಯೋಜಿತವಾಗಿದೆ. ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅಥಿತಿಯಾಗಿ ಪಾಲ್ಗೊಳ್ಳಲಿದ್ದಾರೆ. (06)

<><><>

**2. ಇಂದು, ಕೃಷಿಕ ಮಹಿಳೆಯರ ದಿನಾಚರಣೆ.** ಧಾರವಾಡ ತಾಲೂಕು, ಸಿಂಗನಹಳ್ಳಿ ಗ್ರಾಮದ ಪಾರ್ವತಿ ಮಹಾದೇವ ದಂಡಿನ ಕಳೆದ 15 ವರ್ಷಗಳಿಂದ, 12 ಎಕರೆ ಜಮೀನಿನಲ್ಲಿ ರೇಷ್ಮೆ ಸಾಕಾಣಿಕೆ, ಮೀನುಗಾರಿಕೆ, ಕಬ್ಬು, ಶುಂಠಿ, ಶೇಂಗಾ ಹಾಗೂ ತರಕಾರಿ ಬೆಳೆದು, ಮಾದರಿ, ಪ್ರಗತಿಪರ ಕೃಷಿಕ ಮಹಿಳೆ ಎನಿಸಿದ್ದಾರೆ.

ಬೆಳೆಗಳಿಗೆ ಕೀಟ ನಾಶಕ ಸಿಂಪಡಣೆ, ಜಾನುವಾರು ಸಾಕಾಣಿಕೆ, 3 ಸಾವಿರ ಮೀನು ಮರಿಗಳ ಪಾಲನೆ ಹಾಗೂ ಕಾಯಿಪಲ್ಯೆ ಮಾರಾಟದ ಉಸ್ತುವಾರಿ ಹೊತ್ತು, ಜಾಣ ಮತ್ತು ಲಾಭದಾಯಕ ಕೃಷಿ ಕೈಗೊಂಡು, ಗಮನ ಸೆಳೆದಿದ್ದಾರೆ. ಕೃಷಿ ಉತ್ಪನ್ನಗಳ ಮಾರುಕಟ್ಟೆ ನಿರ್ವಹಣಾ ಸಮಿತಿ ಸದಸ್ಯೆಯಾಗಿ ಅವರು ಮಹತ್ವದ ಕೊಡುಗೆ ನೀಡಿದ್ದಾರೆ.

<><><>

**3. ಕಳೆದ ನವೆಂಬರ್ 9 ರಿಂದ 11ರ ಅವಧಿಯಲ್ಲಿ,** ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ನಾಲ್ವರು ಬಾಣಂತಿಯರ ಸಾವಿನ ಹಿನ್ನೆಲೆ, ಲ್ಯಾಕ್ಟೇಟ್ ಐ.ಪಿ. ದ್ರಾವಣದ ಗುಣಮಟ್ಟಕ್ಕೆ ಸಂಬಂಧಿಸಿ, ನಡೆಸಲಾದ ಪರೀಕ್ಷೆಯಿಂದ, 22 ಬ್ಯಾಚ್‌ಗಳು ಅಸುರಕ್ಷಿತ ಎಂದು, ವರದಿಯಲ್ಲಿ ದೃಢಪಟ್ಟಿದೆ ಎಂದು, ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಕೇಂದ್ರ ಔಷಧ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮಕ್ಕೆ, ಪಶ್ಚಿಮ ಬಂಗಾಳ ಮೂಲದ ಔಷಧ ಕಂಪೆನಿ, ರಿಂಗರ್ಸ್ ಲ್ಯಾಕ್ಟೇಟ್ ಐ.ಪಿ. ದ್ರಾವಣವನ್ನು ಸರಬರಾಜು ಮಾಡಿದ್ದು, ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ, ಕೋರಿದ್ದಾಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

**4. ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ವೈದ್ಯಕೀಯ** ಸಿಬ್ಬಂದಿ ಮೇಲಿನ ಹಲ್ಲೆ ತಡೆಗಟ್ಟಿ, ಸುರಕ್ಷತೆ ಒದಗಿಸಲು, ಅಗತ್ಯ ಸಿಬ್ಬಂದಿ ನಿಯೋಜನೆ, ಸಿ.ಸಿ. ಕ್ಯಾಮೆರಾ ಅಳವಡಿಕೆ ಸೇರಿ, ಹಲವು ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲು ರಾಜ್ಯ ಕಾರ್ಯಪಡೆ ನಿರ್ಣಯಿಸಿದೆ.

ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ ಅಧ್ಯಕ್ಷತೆಯಲ್ಲಿ ನಡೆದ, ಪ್ರಥಮ ಸಭೆಯಲ್ಲಿ, ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳ ಸಂಘದ ಅಧ್ಯಕ್ಷ ಡಾಕ್ಟರ್ ಯತೀಶ ಹಾಗೂ ವಿವಿಧ ವೈದ್ಯಕೀಯ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

<><><>

**5. ನೌಕರರಿಗೆ ಪ್ರೀಮಿಯಂ ರಹಿತ,** ತಲಾ 1 ಕೋಟಿ ರೂಪಾಯಿ ಮೊತ್ತದ ಅಪಘಾತ ವಿಮೆ ಯೋಜನೆ ಜಾರಿಗೊಳಿಸಲು, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕೆ.ಕೆ.ಆರ್.ಟಿ.ಸಿ. ಕೆನರಾ ಬ್ಯಾಂಕ್ ಜೊತೆ ಒಪ್ಪಂದ ಮಾಡಿಕೊಂಡಿದೆ.

ಸಾರಿಗೆ ಖಾತೆ ಸಚಿವ ರಾಮಲಿಂಗಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಒಡಂಬಡಿಕೆ ವಿನಿಮಯವಾಯಿತು.

<><><>

**6. ಮಂಡ್ಯದಲ್ಲಿ, ಈ ತಿಂಗಳ 20, 21 ಹಾಗೂ 22** ರಂದು ಆಯೋಜಿತ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ, 18 ದೇಶಗಳಿಂದ ಅನಿವಾಸಿ ಭಾರತೀಯ–ಕನ್ನಡಿಗರು ಆಗಮಿಸುತ್ತಿದ್ದಾರೆ ಎಂದು, ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಸ್ವಾಗತ ಸಮಿತಿ ಅಧ್ಯಕ್ಷ ಎನ್. ಚಲುವರಾಯಸ್ವಾಮಿ ಮಾತನಾಡಿ, ಸಮ್ಮೇಳನಕ್ಕಾಗಿ ರಾಜ್ಯ ಸರ್ಕಾರ, 25 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ಸರ್ಕಾರಿ ನೌಕರರು ತಮ್ಮ ಒಂದು ದಿನದ ವೇತನವನ್ನು ನೀಡಲು, ಸಮ್ಮತಿಸಿದ್ದಾರೆ, ಎಂದರು.

ಕನ್ನಡ ಸಾಹಿತ್ಯ ಸಮ್ಮೇಳನದ ವಿಶೇಷ ಪ್ರತಿನಿಧಿ ನೋಂದಣಿ ಅವಧಿಯನ್ನು, ಇದೇ 7ರ ವರೆಗೆ ವಿಸ್ತರಿಸಲಾಗಿದೆ.

<><><>

**07. ಹುಬ್ಬಳ್ಳಿಯ ಡಿ.ಎಸ್. ಕರ್ಕಿ ಸಾಹಿತ್ಯ ವೇದಿಕೆ** ಟ್ರಸ್ಟ್ ನೀಡುವ, ರಾಜ್ಯ ಮಟ್ಟದ ಪ್ರಶಸ್ತಿಗೆ, ಕವಿಗಳಾದ ಹೆಬಸೂರ ರಂಜಾನ್, ನಿರ್ಮಲಾ ಶೆಟ್ಟರ್, ಶ್ವೇತಾ ನರಗುಂದ ಹಾಗೂ ಶಿವಾನಂದ ಕುಬಸದ ಆಯ್ಕೆಯಾಗಿದ್ದಾರೆ.

ವೇದಿಕೆ ಅಧ್ಯಕ್ಷ ಎಂ.ಎ. ಸುಬ್ರಹ್ಮಣ್ಯ ಸುದ್ದಿಗೋಷ್ಠಿ ನಡೆಸಿ, ಕವಿ ಬಿ.ಆರ್. ಲಕ್ಷ್ಮಣರಾವ್ ಅವರ ಅಧ್ಯಕ್ಷತೆಯಲ್ಲಿ, ಇದೇ 7ನೇ ತಾರೀಖು ಸಂಜೆ 5.30ಕ್ಕೆ, ಹುಬ್ಬಳ್ಳಿಯ ವಾಣಿಜ್ಯೋದ್ಯಮ ಸಂಸ್ಥೆ ಸಭಾ ಭವನದಲ್ಲಿ, ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದರು.

<><><>

**08. ಧಾರವಾಡ ಘರಾಣೆಯ,** ಸಿತಾರ ರತ್ನ ರಹಿಮತ್ ಖಾನ್ ಸ್ಮರಣೆ ನಿಮಿತ್ತ, ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಮೆಮೋರಿಯಲ್ ಟ್ರಸ್ಟ್, ಧಾರವಾಡದ ಸೃಜನಾ ರಂಗ ಮಂದಿರದಲ್ಲಿ ಆಯೋಜಿಸಿದ್ದ, ಸಂಗೀತೋತ್ಸವದಲ್ಲಿ ನೂರ್‌ಜಹಾನ್ ನದಾಫ್ ಹಾಗೂ ಶೃತಿ ಅರ್ಚಕ್ ಅವರು, ಸಿತಾರ್ ಜುಗಲ್ ಬಂದಿ ಕೇಳುಗರ ಮನಸೂರೆಗೊಂಡಿತು. ನಿಸಾರ ಅಹ್ಮದ್ ತಬಲಾ ಸಾಥ್ ನೀಡಿದರು.

<><><>

**09. ಚಿತ್ರದುರ್ಗದ ಸರಸ್ವತಿಪುರಂ ನಗರದಲ್ಲಿ,** ಹತ್ತು ಎಕರೆ ಪ್ರದೇಶದಲ್ಲಿ, 91 ಕೋಟಿ ರೂಪಾಯಿ ವೆಚ್ಚದಲ್ಲಿ ನೂತನ ನ್ಯಾಯಾಲಯ ಸಂಕೀರ್ಣವನ್ನು, ನಿರ್ಮಿಸಲಾಗುವುದು ಎಂದು, ಕಾನೂನು ಖಾತೆ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಜಿಲ್ಲಾ ವಕೀಲರ ಸಂಘ ಆಯೋಜಿಸಿದ್ದ, ವಕೀಲರ ದಿನಾಚರಣೆಯಲ್ಲಿ ಪಾಲ್ಗೊಂಡು ಸಚಿವರು, ಮಾತನಾಡಿದರು. (07)

<><><>

**10. ಇಂದಿನಿಂದ 16ರ ವರೆಗೆ,** ಹರಿಯಾಣಾದಲ್ಲಿ ಬಿ.ಸಿ.ಸಿ.ಐ. ಆಯೋಜಿತ, ರಾಷ್ಟ್ರೀಯ ಮಹಿಳಾ ಕ್ರಿಕೆಟ್ ಪಂದ್ಯಾವಳಿ ಜರುಗಲಿದೆ.

ಶಿವಮೊಗ್ಗದ ಆರ್. ಅದಿತಿ ಕರ್ನಾಟಕ ರಾಜ್ಯ ಮಹಿಳಾ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಮಧ್ಯಮ ಕ್ರಮಾಂಕದ ಬ್ಯಾಟರ್ ಹಾಗೂ ಬಲಗೈ ಸ್ಪಿನ್ನರ್ ಆಗಿರುವ ಆರ್. ಅದಿತಿ ಅವರ ತಂಡವನ್ನು, ಅಂತಾರಾಷ್ಟ್ರೀಯ ಕ್ರಿಕೆಟ್ ಪಟು ವೇದಾ ಕೃ ್ಣಮೂರ್ತಿ ಮುನ್ನೆಡಸಲಿದ್ದಾರೆ.

**ರಾಜ್ಯದ 19 ವರ್ಷದೊಳಗಿನ** ಬಾಲಕರ ರಾಜ್ಯ ಕ್ರಿಕೆಟ್ ತಂಡಕ್ಕೆ, ಶಿವಮೊಗ್ಗ ವಲಯದ ಎಸ್.ಲೋಹಿತ್ ಆಯ್ಕೆಯಾಗಿದ್ದಾರೆ. (04)

<><><>